ಹಿಂದಿಯನ್ನು ಹಿಂದುಗಳದೆಂದೂ ಮತ್ತು ಪರ್ಶಿಯನೈಸ್ಡ್ ಹಿಂದಿಯನ್ನು ಉರ್ದು ಎಂದು ಗುರುತಿಸಿ ಅದನ್ನು ಮುಸಲ್ಮಾನರಿಗೆ ಅಂಟಿಸಲಾಯಿತು. ಭಾಷೆಯನ್ನು ಧರ್ಮಗಳ ಆಧಾರದ ಮೇಲೆ ಒಡೆಯುವ ಪ್ರಯತ್ನ ಮಾಡಲಾಯಿತು. ಇದರ ದೂರಗಾಮಿ ಪರಿಣಾಮಗಳನ್ನು ಇವತ್ತಿಗೂ ಅನುಭವಿಸುತ್ತಿದ್ದೇವೆ. ನಮ್ಮ ಬಹುದೊಡ್ಡ ವಿದ್ವಾಂಸರಾದ ರಾಮಚಂದ್ರ ಶುಕ್ಲ್ ಕೂಡ ಈ ತಪ್ಪು ಮಾಡಿಬಿಟ್ಟರು. ಹಿಂದಿ ಸಾಹಿತ್ಯದ ಇತಿಹಾಸವನ್ನು ಬರೆಯುವಾಗ ಉರ್ದು ಸಾಹಿತ್ಯವನ್ನು ದೂರವಿಟ್ಟರು. ನಂತರದಲ್ಲಿ ಅದು ದೂರವಾಗುತ್ತಲೇ ಹೋಯಿತು. ಹಿಂದಿ ವಿಭಾಗದಲ್ಲೂ ಉರ್ದು ಸಾಹಿತ್ಯವನ್ನು ಕಲಿಸಬೇಕು. ಹಾಗೆಯೇ ಉರ್ದು ವಿಭಾಗದಲ್ಲಿ ಹಿಂದಿ ಸಾಹಿತ್ಯವನ್ನು ಕಲಿಸಬೇಕು. ಅಂಥದ್ದೊಂದು ಪ್ರಯತ್ನವನ್ನು ನಾವು ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ಮಾಡಿದ್ದೇವೆ. ಜೆಎನ್‌ಯುದಲ್ಲಿಯೂ ಇಂಥದ್ದೊಂದು ಪದ್ಧತಿ ಇತ್ತು. ಆದರೆ ಇದು ಸಾಲದು.

ಬ್ರಿಟಿಷರ ವಿರುದ್ಧದ ಪ್ರತಿಭಟನೆಯೂ ಈ ನವಜಾಗರಣವನ್ನು ರೂಪಿಸಿದೆ. ಭಾರತೇಂದು ಹರಿಶ್ಚಂದ್ರ ಅವರ ಚಿಂತನೆಯಲ್ಲಿ ಈ ಕುರಿತು ಅನೇಕ ವೈರುಧ್ಯಗಳಿದ್ದವು. ನಾನು ಇದನ್ನು ಒಂದು ಆರೋಪವಾಗಿ ಹೇಳುತ್ತಿಲ್ಲ. ಅವರು ಬ್ರಿಟಿಷರನ್ನು ಕೆಲವೊಮ್ಮೆ ವಿರೋಧಿಸಿದರು ಮತ್ತು ಕೆಲವೊಮ್ಮೆ ಮೆಚ್ಚಿಕೊಂಡರು. ಈ ದ್ವಂದ್ವದಿಂದಾಗಿ ಅವರ ನವಜಾಗರಣದ ಕಲ್ಪನೆ ಬೇರೆಯಾಗತೊಡಗಿತ್ತು. ಅಲ್ಲದೆ ಭಾಷೆ ಮತ್ತು ರಾಜ್ಯಗಳ ಸಂಬಂಧವನ್ನು ನಾವು ಯುರೋಪಿಯನ್‌ರಿಂದ ಕಲಿತೆವು. ಫ್ರೆಂಚ್ ಮಾತನಾಡುವವರು ಫ್ರಾನ್ಸ್, ಇಂಗ್ಲಿಷ್ ಮಾತನಾಡುವವರು ಇಂಗ್ಲೆಂಡ್ ಹೀಗೆ. ಇದನ್ನೇ ಅನುಸರಿಸಲು ನಾವು ಯತ್ನಿಸಿದೆವು. ಆದರೆ ಭಾರತದಲ್ಲಿ ಭಾಷೆ ಮತ್ತು ರಾಜ್ಯಗಳ ಸಂಬಂಧ ಯುರೋಪಿನಂತಿರಲಿಲ್ಲ. ನಮ್ಮಲ್ಲಿ ಭಾಷೆಗಳು ಪರಸ್ಪರ ಸಂಬಂಧ ಹೊಂದಿವೆ. ಹಿಂದಿ ನವಜಾಗರಣವನ್ನು ಅನೇಕ ನೆಲೆಗಳಲ್ಲಿ ಸಂಕುಚಿತಗೊಳಿಸಲಾಯಿತು. ಈ ಕುರಿತು ನನ್ನ ಆಲೋಚನೆಗಳನ್ನು ಹಲವು ವಿಮರ್ಶಾ ಲೇಖನಗಳಲ್ಲಿ ಬರೆದಿರುವೆ.

ಭಾಷೆಗಳ ಅಧ್ಯಯನದಲ್ಲಿ ಹೆಚ್ಚಿನ ಸುಧಾರಣೆ



ಆಗಿಲ್ಲ. ಈ ಅಧ್ಯಯನವನ್ನು ನಾವು ಡಿ ಕಲೋನೈಸ್ಡ್ ಮಾಡಿಯೇ ಇಲ್ಲ. 19-20ನೇ ಶತಮಾನದಲ್ಲಿ ಯುರೋಪಿನ ವಿದ್ವಾಂಸರು ಭಾಷೆಯನ್ನು ಹೇಗೆ ಅಧ್ಯಯನ ಮಾಡುತ್ತಿದ್ದರೊ ಹಾಗೆಯೇ ಅಧ್ಯಯನ ಮಾಡುತ್ತಿದ್ದೇವೆ. ಭಾಷಾ ಪರಿವಾರಗಳನ್ನು ಇವತ್ತಿಗೂ ಯುರೋಪಿಯನ್ನರು ಹೇಗೆ ವಿಂಗಡಿಸಿದ್ದಾರೊ ನಾವು ಕೂಡ ಹಾಗೆಯೇ ವಿಂಗಡಿಸಿಕೊಂಡಿದ್ದೇವೆ.

◆ **ನೀವು ಸಂಪಾದಿಸಿರುವ 'ಮಲ್ಲಿಕಾ ಸಮಗ್ರ' ಹಿಂದಿಯಲ್ಲಿನ ಬಹುಮುಖ್ಯ ಸಂಪಾದನಾ ಕೃತಿಯೆಂದು ಕೆಲವರು ನನಗೆ ಹೇಳಿದರು. ಭಾರತೇಂದು ಹರಿಶ್ಚಂದ್ರ ಅವರ ಗೆಳತಿ ಮಲ್ಲಿಕಾ. ಇಷ್ಟು ದಿನ ಮಲ್ಲಿಕಾ ಅವರ ಸಾಹಿತ್ಯ ನಿರ್ಲಕ್ಷ್ಯಕ್ಕೊಳಗಾಗಲು ಕಾರಣವೇನು? ಇಂಥದ್ದೊಂದು ಕೃತಿ ತರಲು ನಿಮಗಿದ್ದ ಒತ್ತಾಸೆಗಳೇನು?**